ದಿನಾಂಕ 02-08-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ 5 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ ಸಿ.ಬಿ.ಕೆ. ವಕೀಲರಿಂದಃ**

ವಾದಿಯು ನನಗೆ ಸುಮಾರು ವರ್ಷಗಳಿಂದ ಪರಿಚಯ ಇರುತ್ತಾರೆ. ಈ ದಾವೆಯನ್ನು ಯಾರು ಹೂಡಿರುತ್ತಾರೆ ಹಾಗೂ ಯಾವ ಪರಿಹಾರ ಕೋರಿ ಹೂಡಿರುತ್ತಾರೆ ಎಂದು ನನಗೆ ತಿಳಿದಿಲ್ಲ. ವಾದಿ ನನ್ನನ್ನು ಸಾಕ್ಷಿ ಹೇಳಲು ಕರೆದಿರುತ್ತಾರೆ. ವಾದಿಯ ಗಂಡನ ಹೆಸರು ಗುಡ್ಡಪ್ಪ ಚಲವಾದಿ. ವಾದ ಪತ್ರದಲ್ಲಿ ಗುಡ್ಡಪ್ಪ ಕಾಳಿ ಎಂದು ಬರೆಸಲಾಗಿದೆ ಎಂದರೆ ಸಾಕ್ಷಿದಾರರು ಅವರ ಹೆಸರು ಗುಡ್ಡಪ್ಪ ಕಾಳಿ ಆಗಿದ್ದು ಗುಡ್ಡಪ್ಪ ಚಲವಾದಿ ಅಲ್ಲ ಎಂದು ನುಡಿದಿರುತ್ತಾರೆ. ಸುಮಾರು 8-10 ವರ್ಷಗಳ ಹಿಂದೆ ಗುಡ್ಡಪ್ಪ ಮೃತಪಟ್ಟಿರುತ್ತಾರೆ. ಗುಡ್ಡಪ್ಪನ ತಾಯಿಯ ಹೆಸರು ನನಗೆ ತಿಳಿದಿಲ್ಲ. ಅವರ ಅಣ್ಣ ತಮ್ಮಂದಿರ ಹೆಸರು ಕರಬಸಪ್ಪ ಮತ್ತು ನೀಲಪ್ಪ (2 ಮತ್ತು 3 ನೇ ಪ್ರತಿವಾದಿಗಳು). ವಾದಿಯ ಮದುವೆಗೆ ನಾನು ಹಾಜರು ಇರುತ್ತೇನೆ. ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಸಹಿ ಮಾಡಿದ ದಾಖಲೆಯನ್ನು ಅವಶ್ಯಕವಿದ್ದಲ್ಲಿ ಹಾಜರುಪಡಿಸುತ್ತೇನೆ. ವಿವಾಹ ನೊಂದಣಿ ಕಾಲಕ್ಕೆ 8-10 ಜನ ಇದ್ದೆವು. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ ನೆನಪಿಲ್ಲ. ವಿವಾಹ ಆಗಿ ಸುಮಾರು 23 ವರ್ಷ ಆಗಿರಬಹುದು. ಯಾವುದೇ ಮದುವೆ ಆಗದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ದಾವಾ ಸ್ವತ್ತಿಗೆ ಸಂಬಂಧಿಸಿದ ಉತಾರವನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತು ವಾದಿಯ ಗಂಡನ ಕುಟುಂಬಕ್ಕೆ ಸೇರಿರುತ್ತದೆ. ಅದು ಸುಮಾರು 8 ಎಕರೆ ಇರುತ್ತದೆ. ದಾವಾ ಸ್ವತ್ತು 5 ರಿಂದ 7 ನೇ ಪ್ರತಿವಾದಿಗಳ ಹೆಸರಿನಲ್ಲಿ ಇದೆ ಎಂದರೆ ನಾನು ನೋಡಿರುವುದಿಲ್ಲ. 5 ನೇ

ಪ್ರತಿವಾದಿಯೊಂದಿಗೆ ಗುಡ್ಡಪ್ಪ ಕಾಳಿ ರವರು ದಿನಾಂಕ 15-04-1991 ರಲ್ಲಿ ವಿವಾಹ ಆಗಿರುತಾರೆ ಎಂದರೆ ನನಗೆ ತಿಳಿದಿಲ್ಲ. ಅವರಿಗೆ 6 ಮತ್ತು 7 ನೇ ಪ್ರತಿವಾದಿಗಳು ಮಕ್ಕಳು ಎಂದರೆ ನನಗೆ ತಿಳಿದಿಲ್ಲ. 5 ನೇ ಪ್ರತಿವಾದಿಯು ಕಾನೂನು ಬದ್ದ ಹೆಂಡತಿಯಾಗಿದ್ದು ಅವರ ಜೀವಿತ ಅವಧಿಯಲ್ಲಿ ಬೇರೆಯವರನ್ನು ವಿವಾಹ ಆದರೆ ಅದು ಊರ್ಜಿತವಲ್ಲ ಎಂದರೆ ನನಗೆ ತಿಳಿದಿಲ್ಲ. ಎಲ್ಲಾ ವಿಚಾರ ತಿಳಿದಿದ್ದರೂ ವಾದಿಗೆ ಸಹಾಯ ಮಾಡವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸದ ಕಾರಣ, 2 ರಿಂದ 4 ನೇ ಪ್ರತಿವಾದಿಗಳು ಏಕಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.